# ಪ್ರವಾದಿ ಮುಹಮ್ಮದ್(ಸ)
# ಮಹಾನ್ ಚಾರಿತ್ರ್ಯವಂತ

ಡಾ. ಸಯ್ಯದ್ ಅಬುಲ್ ಆಲಾ ಮೌದೂದಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಲೋಕಾನುಗ್ರಹಿ ಅಂತಿಮ ಪ್ರವಾದಿ ಹ. ಮುಹಮ್ಮದ್(ಸ) ಅವರು ದೇವಸಂದೇಶವಾಹಕರೆಂಬ ವಾಸ್ತವಿಕತೆಯನ್ನು ಸಾಕ್ಷ್ಯಾಧಾರಗಳ ಸಹಿತ ಈ ಕಿರು ಹೊತ್ತಗೆಯಲ್ಲಿ ಸಾದರಪಡಿಸಲಾಗಿದೆ. ಜೊತೆಗೆ ಅದಕ್ಕೆ ಪೂರಕವಾಗಿ ಅವರ ಮಹೋನ್ನತ ಪಾವನ ವ್ಯಕ್ತಿತ್ವವನ್ನೂ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಪ್ರವಾದಿ ಮುಹಮ್ಮದ್(ಸ) ಅವರ ಬಗ್ಗೆ ತಿಳಿಯುವ ಹಂಬಲ ಹೊತ್ತ ಎಲ್ಲರಿಗೂ ಈ ಕಿರುಬರಹ ಮುಂದಿನ ಅಧ್ಯಯನಕ್ಕೆ ಪ್ರೇರಕವಾದೀತೆಂದು ನಿರೀಕ್ಷಿಸುತ್ತೇವೆ. ಅಲ್ಲಾಹನು ಅನುಗ್ರಹಿಸಲಿ.

ಶಾಂತಿ ಪ್ರಕಾಶನ

"ಮುಹಮ್ಮದ್‌ರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಗ್ರಹಿಸಲು ಕಷ್ಟಸಾಧ್ಯ ಅದರ ಒಂದು ಸಣ್ಣ ಅಂಶವನ್ನಷ್ಟೇ ಗ್ರಹಿಸಲು ನನಗೆ ಸಾಧ್ಯವಾಗಿದೆ. ಎಂತಹ ಹೃದಯಂಗಮ ಬಹುಮುಖಿ ಪ್ರತಿಭೆ! ಎಂತಹ ಅನುಪಮ ರಂಗಗಳು! ಮುಹಮ್ಮದ್ ಎಂಬ ಪ್ರವಾದಿ, ಮುಹಮ್ಮದ್ ಎಂಬ ಆಡಳಿತಗಾರ, ಮುಹಮ್ಮದ್ ಎಂಬ ವ್ಯಾಪಾರಿ, ಮುಹಮ್ಮದ್ ಎಂಬ ಉಪದೇಶಕ, ಮುಹಮ್ಮದ್ ಎಂಬ ತತ್ವಜ್ಞಾನಿ, ಮುಹಮ್ಮದ್ ಎಂಬ ರಾಜಕಾರಣಿ, ಮುಹಮ್ಮದ್ ಎಂಬ ವಾಗ್ಮಿ, ಮುಹಮ್ಮದ್ ಎಂಬ ಸುಧಾರಕ, ಮುಹಮ್ಮದ್ ಎಂಬ ಅನಾಥ ಸಂರಕ್ಷಕ, ಮುಹಮ್ಮದ್ ಎಂಬ ಗುಲಾಮ ವಿಮೋಚಕ, ಮುಹಮ್ಮದ್ ಎಂಬ ಸ್ತ್ರೀ ವಿಮೋಚಕ, ಮುಹಮ್ಮದ್ ಎಂಬ ಕಾನೂನು ತಜ್ಞ ಮುಹಮ್ಮದ್ ಎಂಬ ನ್ಯಾಯಾಧೀಶ, ಮುಹಮ್ಮದ್ ಎಂಬ ಪುಣ್ಯಾತ್ಮ, ಉಜ್ವಲವಾದ ಈ ಎಲ್ಲ ರೂಪಗಳಲ್ಲಿ ಮಾನವ ಜೀವನದ ಈ ಎಲ್ಲ ರಂಗಗಳಲ್ಲಿ ಅವರೋರ್ವ ಹೀರೋ ಆಗಿದ್ದರು."

ಡಾ. ಪ್ರೊ| ರಾಮಕೃಷ್ಣ ರಾವ್
'ಮುಹಮ್ಮದ್(ಸ) ಮಹಾನ್ ಪ್ರವಾದಿ' ಎಂಬ ಪುಸ್ತಕದಲ್ಲಿ

# ಪ್ರವಾದಿ ಮುಹಮ್ಮದ್(ಸ) ಮಹಾನ್ ಚಾರಿತ್ರ್ಯವಂತ

ಪ್ರವಾದಿ ಮುಹಮ್ಮದ್‌ರವರ(ಸ) ಕುರಿತು ಪವಿತ್ರ ಕುರ್‌ಆನ್ ಹೀಗೆನ್ನುತ್ತದೆ:

**"ನೀವು ನಿಶ್ಚಯವಾಗಿಯೂ ಚಾರಿತ್ರ್ಯದ ಉನ್ನತ ಸ್ಥಾನದಲ್ಲಿದ್ದೀರಿ."**

ಮುಹಮ್ಮದ್‌ರವರನ್ನು(ಸ) ದೇವಸಂದೇಶವಾಹಕರೆಂದು ಒಪ್ಪಿಕೊಳ್ಳಲು ನಿರಾಕರಿಸುತ್ತಿದ್ದ ಜನರ ಮುಂದೆ ಅಲ್ಲಾಹನು ಈ ಮೂಲಕ ಅನಿಷೇಧ್ಯ ಸತ್ಯವೊಂದನ್ನು ಸಾದರಪಡಿಸಿದನು. ಚಾರಿತ್ರ್ಯದಲ್ಲಿ ಇಷ್ಟೊಂದು ಪರಿಪೂರ್ಣರಾದ ವ್ಯಕ್ತಿಯನ್ನು ನೀವು ಹೇಗೆ ನಿರಾಕರಿಸುತ್ತೀರಿ ಎಂಬ ತಾರ್ಕಿಕ ಸವಾಲನ್ನು ಅವರ ಮುಂದಿಟ್ಟು ಅವರನ್ನು ಜಿಜ್ಞಾಸೆಗೆ ಒಳಪಡಿಸಿದನು. ವಾಸ್ತವವೇನೆಂದರೆ, ಮುಹಮ್ಮದ್‌ರವರ(ಸ) ಬದುಕನ್ನು ಪೂರ್ವಗ್ರಹ ರಹಿತನಾಗಿ ಅಭ್ಯಸಿಸುವ ಯಾವನೇ ವ್ಯಕ್ತಿ ಅದರಿಂದ ಪ್ರಭಾವಿತನಾಗದಿರಲು ಸಾಧ್ಯವೇ ಇಲ್ಲ. ಮುಹಮ್ಮದ್‌ರವರನ್ನು(ಸ) ದೇವಸಂದೇಶವಾಹಕನೆಂದು ಸಮ್ಮತಿಸಲು ಆತನ ಆತ್ಮಸಾಕ್ಷಿ ನಿರ್ಬಂಧಿತವಾಗುತ್ತದೆ.

## ಪರಿಚಿತ ಸಾಕ್ಷ್ಯ

ಮುಹಮ್ಮದ್‌ರವರ(ಸ) ಪಾವನ ಬದುಕನ್ನು ಎರಡು ಹಂತಗಳಾಗಿ ವಿಭಜಿಸಬಹುದು. ಮೊದಲನೆಯ ಹಂತ ಪ್ರವಾದಿತ್ವಕ್ಕೆ ಮುಂಚಿನ ನಲ್ವತ್ತು ವರ್ಷಗಳ ಜೀವನ. ಎರಡನೆಯದು ಪ್ರವಾದಿತ್ವದ ನಂತರದ 23 ವರ್ಷಗಳ

ಬಾಳ್ವೆ, ಪ್ರವಾದಿತ್ವದ ಬಳಿಕದ ಜೀವನವನ್ನು ಮರುವಿಂಗಡನೆ ಮಾಡಿ ಹದಿಮೂರು ವರ್ಷಗಳ ಮಕ್ಕಾ ಜೀವನ ಮತ್ತು ಹತ್ತು ವರ್ಷಗಳ ಮದೀನಾ ಜೀವನವೆಂದು ಪ್ರತ್ಯೇಕಿಸಬಹುದು. ಪ್ರವಾದಿತ್ವ ಪೂರ್ವದ ನಲ್ವತ್ತು ವರ್ಷಗಳ ಜೀವನದ ವಿವರಗಳನ್ನು ನೋಡುವುದಕ್ಕೆ ಮುಂಚೆ ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ಮೊಟ್ಟಮೊದಲು ವಿಶ್ವಾಸವಿಟ್ಟ ವ್ಯಕ್ತಿಗಳು ಯಾರೆಂಬುದನ್ನು ಸ್ವಲ್ಪ ಪರಿಶೀಲಿಸೋಣ. ಅವರೆಲ್ಲರೂ ಪ್ರವಾದಿವರ್ಯರ(ಸ) ಜೀವನವನ್ನು ಅತ್ಯಂತ ಸನಿಹದಿಂದ ಕಂಡವರೆಂಬುದು ನಮಗೆ ಮೊದಲ ನೋಟದಲ್ಲೇ ಮನವರಿಕೆಯಾಗುತ್ತದೆ. ಉದಾಹರಣೆಗೆ ಹ. ಖದೀಜಾ(ರ), ಹ. ಅಬೂಬಕರ್(ರ), ಹ. ಅಲೀ(ರ) ಮತ್ತು ಹ. ಝೈದ್ ಬಿನ್ ಹಾರಿಸರವರನ್ನು(ರ) ಇಲ್ಲಿ ಪ್ರಸ್ತಾವಿಸಬಹುದು. ಈ ಪೈಕಿ ಹ. ಅಲೀ(ರ) ಅವರ ಬಗ್ಗೆ ಇಸ್ಲಾಮ್ ವಿರೋಧಿಗಳು ಆಕ್ಷೇಪವೆತ್ತಲು ಸಾಧ್ಯ. ಏಕೆಂದರೆ ಅವರು ಆಗ ಮುಹಮ್ಮದ್‌ರವರ(ಸ) ಪೋಷಣೆಯಲ್ಲಿದ್ದ 8 ವರ್ಷ ಪ್ರಾಯದ ಬಾಲಕನಾದ್ದರಿಂದ ಅವರು ತಮ್ಮ ಯಜಮಾನನನ್ನು ಅನುಸರಿಸುವುದು ಸ್ವಾಮಿನಿಷ್ಠೆಯ ಸಹಜ ಬೇಡಿಕೆಯೆಂದು ವಾದಿಸಬಹುದು. ಆದರೆ ಹ. ಖದೀಜಾ(ರ) 55ರ ಹರೆಯದ ಓರ್ವ ಕುಲೀನ ಮಹಿಳೆ. ಅವರು ಹದಿನೈದು ವರ್ಷವನ್ನು ಮುಹಮ್ಮದ್‌ರವರ(ಸ) ಬಾಳ ಸಂಗಾತಿಯಾಗಿ ಕಳೆದಿದ್ದರು. ಒಬ್ಬ ಗಂಡಸಿನ ಬಗ್ಗೆ ಆತನ ಪತ್ನಿಗೆ ತಿಳಿದಿರುವಷ್ಟು ವಿಚಾರಗಳು ಬೇರಾರಿಗೂ ತಿಳಿದಿರಲಿಕ್ಕಿಲ್ಲ ತಾನೇ? ಹಾಗಿರುವಾಗ ಮುಹಮ್ಮದ್‌ರವರ(ಸ) ನಡೆ-ನುಡಿ, ಸ್ವಭಾವ ಮತ್ತು ಪ್ರವೃತ್ತಿಗಳ ಬಗ್ಗೆ ಹ. ಖದೀಜಾರಿಗಿಂತ(ರ) ಹೆಚ್ಚು ತಿಳಿದವರು ಇರಲು ಸಾಧ್ಯವೇ? ಅಲ್ಲದೆ ಹ. ಖದೀಜಾ(ರ) ಕುರೈಶರಲ್ಲೇ ಅತ್ಯಂತ ಬುದ್ಧಿವಂತ ಮತ್ತು ಕುಶಾಗ್ರಮತಿ ಮಹಿಳೆಯೆಂದು ಪ್ರಸಿದ್ಧರಾಗಿದ್ದರು. ಮುಹಮ್ಮದ್‌ರವರೊಂದಿಗೆ(ಸ) ಹದಿನೈದು ವರ್ಷ ವೈವಾಹಿಕ ಜೀವನ ನಡೆಸಿದ್ದ ಹ. ಖದೀಜಾರವರಿಗೆ(ರ) ತಮ್ಮ ಪತಿಯ ಬಗ್ಗೆ ಎಂತಹ ಅಭಿಪ್ರಾಯವಿತ್ತೆಂದು ತಿಳಿಯಲು ಕೇವಲ ಒಂದು ಘಟನೆ ಸಾಕು. 'ಹಿರಾಗುಹೆ'ಯಿಂದ ಮರಳಿದ ಮುಹಮ್ಮದ್(ಸ) ಅವರು

ಅಳುಕುತ್ತಾ ದಿವ್ಯ ಪ್ರೇರಣೆಯ ವಿಷಯವನ್ನು ಮಡದಿಗೆ ತಿಳಿಸಿದಾಗ ಅವರು ಆ ಕೂಡಲೇ ಅದನ್ನು ಅನುಮೋದಿಸಿದರು. ಸಂಕೋಚ ಮತ್ತು ಹಿಂಜರಿಕೆಯಿಂದ ಅಧೀರರಾಗಿದ್ದ ಮುಹಮ್ಮದ್‌ರವರಿಗೆ(ಸ) ಧೈರ್ಯ ತುಂಬಿದರು. ಮುಹಮ್ಮದ್‌ರವರ(ಸ) ನಿಷ್ಕಳಂಕ ಚಾರಿತ್ರ್ಯ ಮತ್ತು ನಿರ್ಮಲ ಸ್ವಭಾವವನ್ನು ಕಣ್ಣಾರೆ ಕಂಡಿದ್ದ ಪತ್ನಿ ಖದೀಜಾರವರಿಗೆ(ರ) ಪತಿಯ ಪ್ರವಾದಿತ್ವವನ್ನು ಒಪ್ಪಲು ಸ್ವಲ್ಪವೂ ಕಷ್ಟವಾಗಲಿಲ್ಲ.

ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸವಿರಿಸಿದ ಆರಂಭದ ವ್ಯಕ್ತಿಗಳಲ್ಲಿ ಹ. ಅಬೂಬಕರ್(ರ) ಪ್ರಮುಖರು. ಅವರು ಮುಹಮ್ಮದ್‌ರವರ(ಸ) ಸಮವಯಸ್ಕರಾಗಿದ್ದುದು ಮಾತ್ರವಲ್ಲ, ಆತ್ಮೀಯ ಗೆಳೆಯರೂ ಆಗಿದ್ದರು. ಸಹಜವಾಗಿಯೇ ಮುಹಮ್ಮದ್‌ರವರ(ಸ) ನಡತೆ ಮತ್ತು ಪ್ರವೃತ್ತಿಗಳ ಬಗ್ಗೆ ಅವರು ಸಾಕಷ್ಟು ತಿಳಿದುಕೊಂಡಿದ್ದರು. ಒಬ್ಬ ಸ್ನೇಹಿತನಾಗಿ ಮುಹಮ್ಮದ್ ರವರ(ಸ) ಜೀವನದ ಒಳಹೊರಗುಗಳನ್ನು ಅಬೂಬಕರ್‌ರವರಷ್ಟು(ರ) ನಿಖರವಾಗಿ ತಿಳಿದವರು ಪ್ರಾಯಶಃ ಬೇರೆ ಇರಲಾರರು. ಮುಹಮ್ಮದ್ ರವರಿಗೆ(ಸ) ಪ್ರವಾದಿತ್ವ ಪ್ರಾಪ್ತಿಯಾದ ಸಮಾಚಾರ ಹೊರಗೆಡಹಿದಾಗ ಹ. ಅಬೂಬಕರ್(ರ) ಕ್ಷಣವೂ ವಿಳಂಬಿಸದೆ ಅವರ ಮೇಲೆ ವಿಶ್ವಾಸವಿರಿಸಿದರು. ಅವರ ಮನಸ್ಸಿನಲ್ಲಿ ಆ ಬಗ್ಗೆ ಸಂಶಯ ಏಳಲೇ ಇಲ್ಲ. ಅಂದರೆ ಮುಹಮ್ಮದ್‌ರವರ(ಸ) ಚಾರಿತ್ರ್ಯವು ಅವರ ಪ್ರಾಣ ಸ್ನೇಹಿತನನ್ನು ನಂಬಲಸಾಧ್ಯ ಸತ್ಯವನ್ನು ಅಂಗೀಕರಿಸುವಂತೆ ಮಾಡಿತ್ತು.

ಹ. ಝೈದ್ ಬಿನ್ ಹಾರಿಸ್(ಸ) ಪ್ರವಾದಿತ್ವದ ಆರಂಭ ಹಂತದಲ್ಲಿ ವಿಶ್ವಾಸವಿರಿಸಿದ್ದ ಮತ್ತೊಬ್ಬ ವ್ಯಕ್ತಿ. ಅವರೊಬ್ಬ ಪ್ರೌಢ ಪ್ರಾಯದ ವ್ಯಕ್ತಿಯಾಗಿದ್ದರು. ಪ್ರವಾದಿವರ್ಯರ(ಸ) ಮನೆಯಲ್ಲಿ ಹಲವು ವರ್ಷ ಕಾಲ ಅವರ ಸೇವಕರಾಗಿ ಇದ್ದರು. ಪತ್ನಿ ಮತ್ತು ಸ್ನೇಹಿತನಂತೆ ಮನೆಯ ಸೇವಕನಿಗೂ ಒಬ್ಬ ವ್ಯಕ್ತಿಯ ನಡೆ–ನುಡಿಗಳ ಬಗ್ಗೆ ಚೆನ್ನಾಗಿ ತಿಳಿದಿರುತ್ತದೆ. ಆತನ ಯಾವ ಲೋಪ ದೋಷವೂ ಅವನಿಂದ ಗುಪ್ತವಾಗಿರುವುದಿಲ್ಲ. ಆದ್ದರಿಂದ ಮುಹಮ್ಮದ್‌ರವರಿಗೆ(ಸ) ಪ್ರವಾದಿತ್ವ ದೊರೆತ ಸಂಗತಿ

ತಿಳಿದಾಗ ಅವರು ಕೂಡಲೇ ಅದನ್ನು ಅನುಮೋದಿಸಿದರು. ಸಚ್ಚಾರಿತ್ರ್ಯ ಮತ್ತು ಸನ್ನಡತೆಯ ಸಾಕಾರವಾಗಿದ್ದ ಮುಹಮ್ಮದ್‌ರವರು(ಸ) ಪ್ರವಾದಿತ್ವ ಪದವಿಗೆ ಅರ್ಹರೆಂಬುದರಲ್ಲಿ ಅವರಿಗೆ ಎಳ್ಳಷ್ಟೂ ಸಂಶಯವಿರಲಿಲ್ಲ.

## ಶತ್ರುಗಳ ಸಾಕ್ಷ್ಯ

ಮುಹಮ್ಮದ್‌ರವರು(ಸ) ಅತ್ಯುನ್ನತ ಚಾರಿತ್ರ್ಯದವರಾಗಿದ್ದ ರೆಂಬುದಕ್ಕೆ ಅವರ ಕಡು ವೈರಿಗಳ ವರ್ತನೆಗಳಲ್ಲೂ ದೃಷ್ಟಾಂತವಿದೆ. ಪ್ರವಾದಿತ್ವವನ್ನು ಉಗ್ರವಾಗಿ ವಿರೋಧಿಸಿದ್ದ ಕುರೈಶ್ ಸರದಾರರೂ ಯಾವತ್ತೂ ಮುಹಮ್ಮದ್‌ರವರ(ಸ) ಚಾರಿತ್ರ್ಯ ಅಥವಾ ನಡತೆಯ ಬಗ್ಗೆ ತಗಾದೆಯೆತ್ತಲಿಲ್ಲ. ಮುಹಮ್ಮದ್‌ರವರ(ಸ) ಪ್ರವಾದಿತ್ವವನ್ನು ಅಲ್ಲಗಳೆಯಲು ಅವರು ಕವಿ, ಜಾದೂಗಾರ, ಮಾಟಗಾರ ಎಂಬಿತ್ಯಾದಿ ಹಲವು ಆರೋಪಗಳನ್ನು ಹೊರಿಸಿದ್ದರು. ಈ ಆರೋಪಗಳು ಎಷ್ಟೇ ನಿಂದನಾತ್ಮಕವಾಗಿದ್ದರೂ ಅವರಲ್ಲಿ ವೈಯಕ್ತಿಕವಾಗಿ ಮುಹಮ್ಮದ್‌ರವರ(ಸ) ಗುಣನಡತೆಗಳ ಬಗ್ಗೆ ಟೀಕೆಗಳಿಲ್ಲವೆಂಬುದು ಗಮನಾರ್ಹ. ವಾಸ್ತವದಲ್ಲಿ ಮುಹಮ್ಮದ್‌ರವರ(ಸ) ಸ್ಫಟಿಕದಂತಹ ಸನ್ನಡತೆಗೆ ಅವರ ಕಡು ವೈರಿಗಳೂ ತಲೆದೂಗುತ್ತಿದ್ದರು.

## ಕಾಲದ ಸಾಕ್ಷ್ಯ

ಮುಹಮ್ಮದ್‌ರವರ(ಸ) ಪ್ರವಾದಿತ್ವಕ್ಕೆ ಮುಂಚಿನ 40 ವರ್ಷಗಳ ಜೀವನವು ಸಚ್ಚಾರಿತ್ರ್ಯ ಮತ್ತು ಸನ್ನಡತೆಗಳ ಪ್ರತಿರೂಪವಾಗಿತ್ತು. ಮಾತ್ರವಲ್ಲ, ಮುಹಮ್ಮದ್‌ರವರು(ಸ) ಪ್ರವಾದಿತ್ವವನ್ನು ವಾದಿಸಲು ಸಿದ್ಧತೆ ನಡೆಸುತ್ತಿದ್ದಾರೆ ಎಂದಾಗಲಿ ಅಥವಾ ಅವರು ಸದ್ಯದಲ್ಲೇ ಒಂದು ಧಾರ್ಮಿಕ ಪಂಥ ಸ್ಥಾಪಿಸಲಿದ್ದಾರೆಂದಾಗಲಿ ಯಾರೂ ಅನುಮಾನಿಸಿರಲಿಲ್ಲ. ಎಷ್ಟರ ವರೆಗೆಂದರೆ ಪ್ರವಾದಿತ್ವ ಪ್ರಾಪ್ತಿಯಾಗುವ ಮುನ್ನಾದಿನ ಕೂಡ ಜನರು ಅವರಲ್ಲಿ ಅಂತಹ ಸಂಶಯಾಸ್ಪದ ನಡವಳಿಕೆಯನ್ನು ಕಂಡಿರಲಿಲ್ಲ. ಒಂದು ವೇಳೆ ಅಂತಹ ಅನುಮಾನ ಯಾರಿಗಾದರೂ ಬಂದಿದ್ದರೆ ಮುಹಮ್ಮದ್‌ರವರ(ಸ) ವಿರುದ್ಧ ವಿರೋಧಿಗಳು ಮಾಡಿದ್ದ ಆರೋಪಗಳಲ್ಲಿ ಅದು ವ್ಯಕ್ತವಾಗುತ್ತಿತ್ತು. ಮುಹಮ್ಮದ್ ರವರ(ಸ) ವಿರುದ್ಧ ಪ್ರವಾದಿತ್ವ ಘೋಷಣೆಗೆ ಪೂರ್ವ ತಯಾರಿ ನಡೆಸುತ್ತಿದ್ದ

ಅಪವಾದ ಕೇಳಿ ಬರುತ್ತಿತ್ತು. ಆದರೆ ಅವರ ವಿರುದ್ಧ ವ್ಯಕ್ತವಾದ ಟೀಕೆಗಳಲ್ಲಿ ಆ ಬಗೆಯ ಅಣಕ ಇರಲಿಲ್ಲವೆಂಬುದು ಗಮನಾರ್ಹ.

## ಪರಿಸರದ ಸಾಕ್ಷ್ಯ

ಪ್ರವಾದಿ ಮುಹಮ್ಮದ್‌ರವರು(ಸ) ಮಕ್ಕಾದಲ್ಲಿ ಹದಿಮೂರು ವರ್ಷಗಳ ಕಾಲ ಸಂದೇಶ ಪ್ರಚಾರ ಕಾರ್ಯ ನಡೆಸಿದರು. ಆದರೆ ಈ ಅವಧಿಯಲ್ಲಿ ಅವರ ಮೇಲೆ ವಿಶ್ವಾಸವಿರಿಸಿದವರು ಅವರದೇ ಗೋತ್ರ ಮತ್ತು ಬಡಾವಣೆಯ ಕೆಲವು ವ್ಯಕ್ತಿಗಳು ಮಾತ್ರ, ಅದೇ ವೇಳೆ ಅವರನ್ನು ವಿರೋಧಿಸುತ್ತಿದ್ದವರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಮುಹಮ್ಮದ್‌ರವರು(ಸ) ಆರಂಭದಲ್ಲಿ ಸಂದೇಶ ಪ್ರಚಾರ ನಡೆಸಿದ ಪ್ರದೇಶ ಮತ್ತು ಅವರು ಅಭಿಸಂಬೋಧಿಸಿದ ಜನರು ಅವರಿಗೆ ತೀರಾ ಪರಿಚಿತರಾಗಿದ್ದರು ಎಂಬುದು ಇಲ್ಲಿ ಗಮನಿಸಬೇಕಾದ ವಿಷಯ. ಪ್ರತಿಯೊಬ್ಬರೂ ಮುಹಮ್ಮದ್ ರವರ(ಸ) ನಲ್ವತ್ತು ವರ್ಷದ ಬದುಕನ್ನು ಅತ್ಯಂತ ಹತ್ತಿರದಿಂದ ನೋಡಿದ್ದರು. ಆದ್ದರಿಂದ ಒಬ್ಬ ವ್ಯಕ್ತಿ ಪ್ರವಾದಿಯ ಸೋಗು ಹಾಕುವುದಾದರೆ ಆತ ಅಪರಿಚಿತ ಪರಿಸರ ಮತ್ತು ಜನರನ್ನೇ ಆಯ್ಕೆ ಮಾಡುತ್ತಾನೆಂದು ಯಾರಿಗೂ ಊಹಿಸಬಹುದು. ಇದಕ್ಕೆ ತೀರಾ ತದ್ವಿರುದ್ಧವಾಗಿ ಮುಹಮ್ಮದ್ ರವರು(ಸ) ತಮ್ಮ ಬಾಲ್ಯ, ಯೌವನ ಮತ್ತು ಮಧ್ಯ ವಯಸ್ಸಿನ ವರೆಗಿನ ಅವಧಿಯನ್ನು ಯಾವ ಪ್ರದೇಶ ಮತ್ತು ಜನರ ಮುಂದೆ ಕಳೆದಿದ್ದರೋ ಅದೇ ಪರಿಸರ ಮತ್ತು ಜನತೆಯನ್ನು ಅವರು ತಮ್ಮ ಪ್ರವಾದಿತ್ವದ ಕರ್ತವ್ಯ ನಿರ್ವಹಣೆಗಾಗಿ ಆಯ್ದುಕೊಂಡರು. ಮುಹಮ್ಮದ್‌ರವರ(ಸ) ಸಚ್ಚಾರಿತ್ರ್ಯ ಮತ್ತು ಸನ್ನಡತೆಗಳನ್ನು ಪ್ರತ್ಯಕ್ಷ ಕಾಣದೆ ಅವರನ್ನು ದೇವಸಂದೇಶವಾಹಕನೆಂದು ಅಂಗೀಕರಿಸುವುದು ಸಾಧ್ಯವೇ ಇಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸವಿರಿಸಿದ ವ್ಯಕ್ತಿಗಳು ಅವರ ನಿಷ್ಕಳಂಕ ವ್ಯಕ್ತಿತ್ವ, ಪ್ರಾಮಾಣಿಕ ಮತ್ತು ಕಾಪಟ್ಯರಹಿತ ಜೀವನವನ್ನು ಕಣ್ಣಾರೆ ಕಂಡಿದ್ದರು. ಆದ್ದರಿಂದ ಅವರು ಮುಹಮ್ಮದ್‌ರವರ(ಸ) ಪ್ರವಾದಿತ್ವ ಘೋಷಣೆಯನ್ನು ಸತ್ಯವೆಂದು ಅಂಗೀಕರಿಸಲು ನಿರ್ಬಂಧಿತರಾಗಿದ್ದರು.

## ನಡೆ–ನುಡಿಯಲ್ಲಿ ಸಮನ್ವಯ

ಪ್ರವಾದಿ ಮುಹಮ್ಮದ್‌ರವರು(ಸ) ಧರ್ಮ ವಿರೋಧಿಗಳ ಕೆಡುಕುಗಳನ್ನು ಒಂದೊಂದಾಗಿ ಟೀಕಿಸುತ್ತಿದ್ದರು. ಸಮಾಜದಲ್ಲಿ ವ್ಯಾಪಕವಾಗಿದ್ದ ದುಷ್ಕೃತ್ಯಗಳ ಪೈಕಿ ಪ್ರತಿಯೊಂದನ್ನೂ ಅವರು ಉಗ್ರವಾಗಿ ಖಂಡಿಸುತ್ತಿದ್ದರು. ಜತೆಗೆ ಜನರಿಗೆ ಒಳಿತಿನ ಉಪದೇಶ ನೀಡುತ್ತಿದ್ದರು. ಪ್ರವಾದಿವರ್ಯರನ್ನು(ಸ) ತೀವ್ರವಾಗಿ ವಿರೋಧಿಸುತ್ತಿದ್ದ ಜನರು ಕೂಡ ಅವರ ವಿರುದ್ಧ ಆಷಾಢ ಭೂತಿತನದ ಅಪವಾದ ಹೊರಿಸುತ್ತಿರಲಿಲ್ಲ. ಪ್ರವಾದಿವರ್ಯರು(ಸ) ಬೋಧಿಸು ತ್ತಿದ್ದ ಉತ್ತಮ ಮೌಲ್ಯಗಳು ಸ್ವತಃ ಅವರ ಬದುಕಿನಲ್ಲಿ ಮೇಳೈಸಿದ್ದುದೇ ಅದಕ್ಕೆ ಕಾರಣ. ಅವರು ಯಾವ್ಯಾವ ಕೆಡುಕಿನಿಂದ ಜನರನ್ನು ತಡೆಯುತ್ತಿದ್ದರೋ ಅವುಗಳಿಂದ ಸ್ವತಃ ತಮ್ಮನ್ನು ದೂರವಿಟ್ಟುಕೊಂಡಿದ್ದರು. ಆದ್ದರಿಂದ ಪ್ರವಾದಿ ವರ್ಯರ(ಸ) ಮಾತು ಕೃತಿಗಳಲ್ಲಿ ಅಂತರವಿದೆಯೆಂದು ವಿರೋಧಿಗಳಿಗೂ ಹೇಳಲು ಸಾಧ್ಯ ವಿರಲಿಲ್ಲ. ಮಾತ್ರವಲ್ಲ, ಅವರ ಉತ್ಕೃಷ್ಟ ಚಾರಿತ್ರ್ಯವು ವಿರೋಧಿಗಳ ಮೇಲೂ ಪ್ರಭಾವ ಬೀರುತ್ತದೆಂಬುದಕ್ಕೆ ಅನೇಕ ಉದಾಹರಣೆ ಗಳನ್ನು ಕೊಡಬಹುದು. ಈ ಪೈಕಿ ಕೇವಲ ಒಂದು ಘಟನೆಯನ್ನಷ್ಟೇ ಇಲ್ಲಿ ಉಲ್ಲೇಖಿಸಬಯಸುತ್ತೇನೆ–

## ಚಾರಿತ್ರ್ಯಕ್ಕೆ ಮನಸೋತವರು

ಒಮ್ಮೆ ಪ್ರವಾದಿವರ್ಯರು(ಸ) ಹರಮ್‌ನ ಒಂದು ಮೂಲೆಯಲ್ಲಿ ಆಸೀನರಾಗಿದ್ದರು, ಮತ್ತೊಂದೆಡೆ ಕುರೈಶ್‌ನ ಪ್ರತಿಷ್ಠಿತ ಸರದಾರ್ರರು ಕುಳಿತು ಹರಟೆ ಹೊಡೆಯುತ್ತಿದ್ದರು. ಅಷ್ಟರಲ್ಲಿ ಒಬ್ಬ ಪರಊರಿನ ವ್ಯಕ್ತಿ ಅಲ್ಲಿಗೆ ಬಂದು ಅವರೊಡನೆ ಅಬೂಜಹಲ್‌ನ ಬಗ್ಗೆ ವಿಚಾರಿಸಿದ. ಅಬೂಜಹಲ್ ತನ್ನಿಂದ ಒಂಟೆ ಖರೀದಿಸಿರುವುದಾಗಿಯೂ ಹಣ ಪಾವತಿಸಲು ಮೀನಮೇಷ ಎಣಿಸುತ್ತಿರುವುದಾಗಿಯೂ ನಿವೇದಿಸಿಕೊಂಡ. ಕುರೈಶರ ಸರದಾರರೂ ಆ ವ್ಯಕ್ತಿಯನ್ನು ಗೋಳು ಹೊಯ್ದು ತಮಾಷೆ ನೋಡಲಿಕ್ಕಾಗಿ, "ಅಗೋ ಅಲ್ಲಿ ಕುಳಿತಿರುವ ವ್ಯಕ್ತಿಯ ಬಳಿ ಹೋಗು. ಅವರು ಅಬೂಜಹಲ್‌ನಿಂದ ನಿನಗೆ ಬರಲಿರುವ ಹಣವನ್ನು ಕೊಡಿಸುವರು" ಎಂದು ಪ್ರವಾದಿವರ್ಯರ(ಸ)

ಕಡೆ ಬೆಟ್ಟು ಮಾಡುತ್ತಾ ಹೇಳಿದರು. ಇವರ ಕಪಟತೆಯನ್ನು ಅರಿಯದ ಆ ಆಗಂತುಕ ನೇರವಾಗಿ ಪ್ರವಾದಿವರ್ಯರ(ಸ) ಬಳಿಗೆ ಬಂದು ತಾನು ಅಲ್ಲಿಗೆ ಬಂದ ಉದ್ದೇಶವನ್ನು ವಿವರಿಸಿದ. ಕುರೈಶ್ ಸರದಾರರು ಕಣ್ಣು ಬಿಟ್ಟು ನೋಡುತ್ತಿದ್ದಂತೆಯೇ ಪ್ರವಾದಿಯವರು(ಸ) ಆ ವ್ಯಕ್ತಿಯ ಜತೆ ಅಬೂಜಹಲ್‌ನ ಮನೆಯ ಕಡೆ ನಡೆದರು. ಕುತೂಹಲ ತಡೆಯಲಾಗದೆ ಕುರೈಶ್ ಗಣ್ಯರು ಒಬ್ಬ ವ್ಯಕ್ತಿಯನ್ನು ಅವರ ಹಿಂದೆ ಕಳಿಸಿದರು. ಪ್ರವಾದಿ ವರ್ಯರು(ಸ) ಅಬೂಜಹಲ್‌ನ ಮನೆಗೆ ಹೋಗಿ ಬಾಗಿಲು ತಟ್ಟಿದರು. ಹೊರಗೆ ಬಂದ ಅಬೂಜಹಲ್ ದೃಶ್ಯ ಕಂಡು ಬೆರಗಾದ. ಪ್ರವಾದಿ ವರ್ಯರು(ಸ) ತಾವು ಕರೆತಂದ ವ್ಯಕ್ತಿಯ ಕಡೆ ತೋರಿಸುತ್ತಾ, ಈತನಿಗೆ ಸಂದಾಯವಾಗಬೇಕಾದ ಹಣ ಮರಳಿಸುವಂತೆ ಹೇಳಿದರು. ಬೆವತು ಹೋಗಿದ್ದ ಅಬೂಜಹಲ್ ಮರು ಮಾತನಾಡದೆ ಒಳಗೆ ಹೋಗಿ ಆ ವ್ಯಕ್ತಿಗೆ ಪಾವತಿಸಬೇಕಾದ ಹಣವನ್ನು ತಂದುಕೊಟ್ಟ. ಪವಾಡದಂತೆ ನಡೆದ ಘಟನೆಯ ವಿವರ ತಿಳಿದು ಕುರೈಶ್ ಪ್ರಮುಖರು ಅವಾಕ್ಕಾದರು.

ವಿರೋಧಿಗಳ ಮೇಲೂ ಪ್ರವಾದಿವರ್ಯರ(ಸ) ವ್ಯಕ್ತಿತ್ವ ಎಂತಹ ಮಾಂತ್ರಿಕ ಪರಿಣಾಮ ಬೀರುತ್ತದೆಂಬುದಕ್ಕೆ ಈ ಘಟನೆ ಸ್ಪಷ್ಟ ಸಾಕ್ಷಿ.

ಕಾರ್ಯತಃ ಒಬ್ಬ ಪಾಳೆಯಗಾರನಂತಿದ್ದ ವ್ಯಕ್ತಿಯನ್ನು ಪ್ರವಾದಿ ಯವರು(ಸ) ಯಾವ ರೀತಿ ತಮ್ಮ ವರ್ಚಸ್ಸಿನ ಮೂಲಕ ಸೋಲಿಸಿದರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಕುರೈಶರ ಗಣ್ಯ ಸರದಾರರು ಕೂಡ ಅಬೂಜಹಲ್‌ನೊಂದಿಗೆ ಮಾತನಾಡಲು ಅಂಜುತ್ತಿದ್ದಾಗ ಪ್ರವಾದಿವರ್ಯರು(ಸ) ಓರ್ವ ಮರ್ದಿತನಿಗೆ ನ್ಯಾಯ ದೊರಕಿಸಿಕೊಟ್ಟ ಈ ಘಟನೆ ಇತಿಹಾಸದಲ್ಲೇ ಅನನ್ಯ. ನಿಜವಾಗಿ ಇದು ಪ್ರವಾದಿವರ್ಯರ(ಸ) ನಿಷ್ಕಳಂಕ ಮತ್ತು ಪಾವನ ಬದುಕಿನ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಪ್ರವಾದಿವರ್ಯರು(ಸ) ವ್ಯಕ್ತಿಗತ ನಡೆ-ನುಡಿಗಳಲ್ಲಿ ಅತ್ಯಂತ ಕ್ಷುಲ್ಲಕವಾದ ಲೋಪವಿರುತ್ತಿದ್ದರೂ ಅಬೂಜಹಲ್‌ನಂತಹ ಬದ್ಧ ವೈರಿಯನ್ನು ಮಣಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

## ಮಾನವೇತಿಹಾಸದಲ್ಲೇ ಅಪೂರ್ವ

ಪ್ರವಾದಿ ಮುಹಮ್ಮದ್‌ರವರ(ಸ) ಹತ್ತು ವರ್ಷಗಳ ಮದೀನಾ ವಾಸವು ಅವರ ಬದುಕಿನ ಪ್ರಮುಖ ಮಜಲುಗಳಲ್ಲೊಂದು. ಈ ಅವಧಿಯು ಅವರ ಜೀವನದ ವಿವಿಧ ಮುಖಗಳನ್ನು ತೆರೆದಿಡುತ್ತದೆ. "ನಿಮಗೆ ಅಲ್ಲಾಹನ ಪ್ರವಾದಿಯಲ್ಲಿ ಅತ್ಯುತ್ತಮ ಮಾದರಿಯಿದೆ" ಎಂಬ ಕುರ್‌ಆನ್ ಸೂಕ್ತ ಅವತೀರ್ಣಗೊಂಡ ಬಳಿಕದ ಈ ಕಾಲಾವಧಿಯು ಹಲವಾರು ರೀತಿಯಲ್ಲಿ ಗಮನಾರ್ಹವೆನಿಸುತ್ತದೆ. ಒಬ್ಬ ವ್ಯಕ್ತಿಯನ್ನು ಸಂಪೂರ್ಣ ಸಮಾಜಕ್ಕೆ ಮಾದರಿಯೆಂದು ಹೇಳುವುದು ಸಾಮಾನ್ಯ ಸಂಗತಿಯಲ್ಲ.

ಪ್ರವಾದಿವರ್ಯರ(ಸ) ಜೀವನವು ಸಮಾಜದ ಮುಂದೆ ತೆರೆದ ಪುಸ್ತಕದಂತೆ ಸುಸ್ಪಷ್ಟವಾಗಿತ್ತು. ಅವರ ಬದುಕಿನ ಯಾವ ವಿಷಯವೂ ಖಾಸಗಿಯಾಗಿರಲಿಲ್ಲ. ಎಲ್ಲವೂ ಸಾರ್ವಜನಿಕರ ಪರಾಮರ್ಶೆಗೆ ಮುಕ್ತವಾಗಿತ್ತು. ಅವರ ಜೀವನದ ಪ್ರತಿಯೊಂದು ನಡೆ-ನುಡಿಯನ್ನೂ ಜನರು ಪರಾಮರ್ಶಿಸಬಹುದಾಗಿತ್ತು, ಮಾತ್ರವಲ್ಲ, ಪ್ರವಾದಿವರ್ಯರ(ಸ) ಜೀವನದ ಖಾಸಗೀ ವಿಚಾರಗಳ ಬಗ್ಗೆಯೂ ಅವರ ಪತ್ನಿಯರಿಂದ ಕೇಳಿ ತಿಳಿಯುವ ಅನುಮತಿಯನ್ನು ನೀಡಲಾಗಿತ್ತು. ಒಬ್ಬ ವ್ಯಕ್ತಿಯ ಸಂಪೂರ್ಣ ಬದುಕನ್ನು ಹತ್ತು ವರ್ಷಗಳ ಕಾಲ ಸಾರ್ವಜನಿಕರ ಕಣ್ಣುಗಳಿಗೆ ಮುಕ್ತಗೊಳಿಸಿದ ಬೇರೆ ಉದಾಹರಣೆ ಇತಿಹಾಸದಲ್ಲಿ ಕಾಣಸಿಗದು. ಈ ಕಠಿಣ ಪರೀಕ್ಷೆಯನ್ನು ಓರ್ವ ಸಾಮಾನ್ಯ ಮನುಷ್ಯನಿಗೆ ಸಮರ್ಥವಾಗಿ ಎದುರಿಸಲು ಸಾಧ್ಯವಿಲ್ಲವೆಂಬುದು ನಿಸ್ಸಂಶಯ. ಪ್ರವಾದಿ ಮುಹಮ್ಮದ್‌ರವರು(ಸ) ಈ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಿದುದು ಮಾತ್ರವಲ್ಲ, ಅತ್ಯಂತ ನಗಣ್ಯವೆನಿಸಬಹುದಾದ ಒಂದೇ ಒಂದು ಲೋಪವೂ ಅವರಿಂದ ಸಂಭವಿಸಲಿಲ್ಲ. ಆದ್ದರಿಂದಲೇ 'ಅವರ ಜೀವನವು ಮನುಷ್ಯರಿಗೆ ಅತ್ಯುತ್ತಮ ಮಾದರಿಯಾಗಿದೆ'ಯೆಂಬ ಕುರ್‌ಆನ್ ವಾಕ್ಯವು ಅವರ ಚಾರಿತ್ರ್ಯದ ಮಹಾನತೆಯೆಡೆಗೆ ಬೆಟ್ಟು ಮಾಡುತ್ತದೆ. ಜತೆಗೆ ಅದು ಅವರ ಪ್ರವಾದಿತ್ವವನ್ನೂ ಸಂಶಯಾತೀತಗೊಳಿಸುತ್ತದೆ.

ಪ್ರವಾದಿವರ್ಯರ(ಸ) ಕೌಟುಂಬಿಕ ಜೀವನವನ್ನು ಪರಿಶೀಲಿಸಿದರೆ

ಅವರೋರ್ವ ಉತ್ತಮ ಮತ್ತು ಆದರ್ಶ ಪತಿಯಾಗಿ ಕಂಡು ಬರುತ್ತಾರೆ. ಸಾರ್ವಜನಿಕ ರಂಗದಲ್ಲಿ ಅವರೊಬ್ಬ ಅಪ್ರತಿಮ ಹಿತೈಷಿ ಮತ್ತು ಆತ್ಮೀಯ ಸ್ನೇಹಿತರಾಗಿ ಗೋಚರಿಸುತ್ತಾರೆ. ವ್ಯವಹಾರಗಳಲ್ಲಿ ಅವರೊಬ್ಬ ನಂಬಿಗಸ್ಥ ಮತ್ತು ಪ್ರಾಮಾಣಿಕ ವರ್ತಕರಾಗಿ ಕಂಗೊಳಿಸುತ್ತಾರೆ. ನ್ಯಾಯಾಧೀಶನ ಕುರ್ಚಿಯ ಮೇಲೆ ಕುಳಿತರೆ ಅವರು ಅಸಾಮಾನ್ಯ ನ್ಯಾಯದಾನಿಯಾಗಿ ಕಾಣುತ್ತಾರೆ. ಅವರು ಬದುಕಿನಲ್ಲಿ ಸಿಹಿ ಮತ್ತು ಕಹಿಗಳನ್ನು ಸಮಾನವಾಗಿ ಉಂಡಿದ್ದಾರೆ. ಕೋಪ–ತಾಪಗಳನ್ನೂ ಪ್ರೀತಿ–ವಾತ್ಸಲ್ಯಗಳನ್ನೂ ಕಂಡಿದ್ದಾರೆ. ಆದರೆ ಯಾವ ಸ್ಥಿತಿಯಲ್ಲೂ ಪ್ರವಾದಿವರ್ಯರ(ಸ) ಬಾಯಿಯಿಂದ ಸತ್ಯಕ್ಕೆ ವಿರುದ್ಧವಾದ ಏನನ್ನೂ ಜನರು ಆಲಿಸಿಲ್ಲ. ಹತ್ತು ವರ್ಷಗಳ ಕಾಲ ಅವರ ಪ್ರತಿಯೊಂದು ಮಾತು ಮತ್ತು ನಡವಳಿಕೆಯನ್ನೂ ಅತ್ಯಂತ ಕರಾರುವಾಕ್ಕಾಗಿ ದಾಖಲಿಸಲಾಯಿತು. ಆದರೂ ಸತ್ಯಕ್ಕೆ ದೂರವಾದ ಒಂದೇ ಒಂದು ಮಾತು ಅಥವಾ ವರ್ತನೆ ಅವರ ವ್ಯವಹಾರಗಳಲ್ಲಿ ಕಂಡು ಬರಲಿಲ್ಲ. ಎಲ್ಲಿಯ ವರೆಗೆಂದರೆ ಕೋಪದ ಪರಾಕಾಷ್ಠೆಯಲ್ಲೂ ಅವರ ಬಾಯಿಯಿಂದ ಕೆಟ್ಟ ಮಾತು ಬರಲಿಲ್ಲ. ಈ ವೈಶಿಷ್ಟ್ಯವನ್ನು ಸಾಮಾನ್ಯ ಮನುಷ್ಯನೊಬ್ಬನ ಬದುಕಿನಲ್ಲಿ ಕಾಣಲು ಸಾಧ್ಯವೇ?

## ಶತ್ರುಗಳೊಂದಿಗೆ ಔದಾರ್ಯ

ಪ್ರವಾದಿ ಮುಹಮ್ಮದ್‌ರವರು(ಸ) ತಮ್ಮ ಕಾರ್ಯ ಸಾಧನೆಯ ಹಾದಿಯಲ್ಲಿ ಶತ್ರುಗಳೊಂದಿಗೆ ಯುದ್ಧ ಮಾಡಬೇಕಾದ ಹಲವು ಪ್ರಸಂಗಗಳು ಎದುರಾದವು. ಆದರೆ ಅವರು ಶತ್ರುಗಳೊಂದಿಗೂ ನ್ಯಾಯಪೂರ್ಣ ವರ್ತನೆಯನ್ನೇ ತೋರಿದರು. ಮಕ್ಕಾ ವಿಜಯದ ಆ ಅವಿಸ್ಮರಣೀಯ ಸನ್ನಿವೇಶ ಇಲ್ಲಿ ಉಲ್ಲೇಖನೀಯವೆನಿಸುತ್ತದೆ. ವಿರೋಧಿ ಪಾಳಯ ಸೋತು ಸುಣ್ಣವಾಗಿದೆ. ವೈರಿ ಸೇನೆಯ ದೊಡ್ಡದೊಡ್ಡ ಸರದಾರರು ತಲೆ ಬಾಗಿಸಿ ನಿಂತಿದ್ದಾರೆ. ಪ್ರತಿಯೊಬ್ಬರೂ ಆತಂಕ ಮತ್ತು ದುಗುಡದ ಕ್ಷಣಗಳನ್ನು ಎದುರಿಸುತ್ತಿದ್ದಾರೆ. ಹದಿಮೂರು ವರ್ಷಗಳ ಕಾಲ ಮಕ್ಕಾದಲ್ಲಿ ಪ್ರವಾದಿ ವರ್ಯರನ್ನು(ಸ) ಮತ್ತವರ ಸಚ್ಚರಿತ ಬೆಂಬಲಿಗರನ್ನು ನಾನಾ ರೀತಿಯಿಂದ

ಪೀಡಿಸಿದ್ದ, ಆ ಬಳಿಕ ಮದೀನಾದಲ್ಲೂ ಬೆಂಬಿಡದೆ ಅವರಿಗೆ ಕಿರುಕುಳ ನೀಡಿ ಸತಾಯಿಸಿದ ಮರ್ದಕರು ಅಸಹಾಯಕರಾಗಿ ನೋಡುತ್ತಿದ್ದಾರೆ. ಪ್ರವಾದಿವರ್ಯರ(ಸ) ಒಂದೇ ಒಂದು ಸೂಚನೆ ಅವರೆಲ್ಲರ ಪ್ರಾಣಹರಣಕ್ಕೆ ಹೇತುವಾಗ ಬಹುದಿತ್ತು. ಆದರೆ ಆ ಕರುಣಾಮೂರ್ತಿ ಮಾಡಿದ್ದಾದರೂ ಏನು? "ಇಂದು ಯಾರೊಂದಿಗೂ ಪ್ರತೀಕಾರವೆಸಗಲಾಗದು" ಎಂಬ ಘೋಷಣೆ ಹೊರಟದ್ದೇ ತಡ, ಮರಣವನ್ನೇ ನಿರೀಕ್ಷಿಸುತ್ತಿದ್ದ ವೈರಿ ಪಾಳಯ ಬೆಕ್ಕಸ ಬೆರಗಾಯಿತು. ಯುದ್ಧಾಪರಾಧಗಳಲ್ಲಿ ಭಾಗಿಯಾದ ಕೆಲವೇ ವ್ಯಕ್ತಿಗಳನ್ನು ಹೊರತುಪಡಿಸಿ ಇತರೆಲ್ಲರಿಗೂ ಸಾರ್ವತ್ರಿಕ ಕ್ಷಮೆ ಘೋಷಿಸಲಾಯಿತು.

## ವಚನಪಾಲನೆ

ಪ್ರವಾದಿವರ್ಯರು(ಸ) ವಚನ ಪಾಲನೆಯ ಬಗ್ಗೆ ಎಷ್ಟು ಸೂಕ್ಷ್ಮರಾಗಿದ್ದ ರೆಂದರೆ ಜೀವನದುದ್ದಕ್ಕೂ ತಮ್ಮೊಂದಿಗೆ ವಿಶ್ವಾಸ ಘಾತುಕತನ ತೋರಿದ ವ್ಯಕ್ತಿಗಳನ್ನೂ ಅವರು ಮನಃಪೂರ್ವಕ ಕ್ಷಮಿಸಿದ್ದರು. ಮಾತ್ರವಲ್ಲ, ಎಂದೂ ಅವರ ವಿಶ್ವಾಸದ್ರೋಹಕ್ಕೆ ಪ್ರತಿಯಾಗಿ ವಚನಭಂಗ ಮಾಡಿರಲಿಲ್ಲ. ಅವರ ಕಡು ವೈರಿಗಳು ಕೂಡಾ ಅವರನ್ನು ವಿಶ್ವಾಸಘಾತುಕನೆಂದು ಒಮ್ಮೆಯೂ ಹೇಳಿದ ಬಗ್ಗೆ ವರದಿಯಾಗಿಲ್ಲ. ಕರಾರುಗಳ ಪಾಲನೆಯ ಬಗ್ಗೆ ಅವರು ಎಂತಹ ಕಾಳಜಿ ಹೊಂದಿದ್ದರೆಂಬುದಕ್ಕೆ ಹುದೈಬಿಯಾ ಸಂಧಿ ಅತ್ಯುತ್ತಮ ನಿದರ್ಶನ. ಪ್ರಸ್ತುತ ಒಪ್ಪಂದದ ಒಂದು ಶರತ್ತು ಅತ್ಯಂತ ಆಕ್ಷೇಪಾರ್ಹವಾಗಿತ್ತು. ಅದರ ಪ್ರಕಾರ ಯಾರಾದರೊಬ್ಬ ವ್ಯಕ್ತಿ ಮಕ್ಕಾದಿಂದ ಇಸ್ಲಾಮ್ ಸ್ವೀಕರಿಸಿ ಮದೀನಾಕ್ಕೆ ಹೋದರೆ ಆತನನ್ನು ಮಕ್ಕಾಕ್ಕೆ ಹಿಂದಿರುಗಿಸಬೇಕಾಗಿತ್ತು. ಅದೇ ವೇಳೆ ಮದೀನಾದಿಂದ ಯಾರಾದರೂ ಮಕ್ಕಾಕ್ಕೆ ಹೋದರೆ ಅವರನ್ನು ಮರಳಿಸಬೇಕಾದ ಹೊಣೆ ಕುರೈಶರ ಮೇಲಿರಲಿಲ್ಲ. ಈ ಶರತ್ತಿಗೆ ಪ್ರವಾದಿ ವರ್ಯರು(ಸ) ಒಪ್ಪಿಗೆ ಸೂಚಿಸಿಯಾದ ಕೆಲವೇ ಕ್ಷಣಗಳಲ್ಲಿ ಮಕ್ಕಾದಿಂದ ಅಬೂಜಂದಲ್(ರ) ಎಂಬೋರ್ವ ವ್ಯಕ್ತಿ ಪ್ರವಾದಿವರ್ಯರ(ಸ) ಬಳಿ ಓಡೋಡಿ ಬಂದರು. ಅವರ ಶರೀರವಿಡೀ ಗಾಯಗಳಿಂದ ಜರ್ಝರಿತ

ವಾಗಿತ್ತು. ಕಬ್ಬಿಣದ ಬೇಡಿಗಳಿಂದ ಅವರ ಕಾಲನ್ನು ಬಿಗಿಯಲಾಗಿತ್ತು. ಇಸ್ಲಾಮ್ ಸ್ವೀಕರಿಸಿದ ತಪ್ಪಿಗಾಗಿ ಹಿಂಸೆ, ಮರ್ದನಗಳಿಗೆ ಗುರಿಯಾಗಿದ್ದ ಆ ವ್ಯಕ್ತಿ ಪ್ರವಾದಿವರ್ಯರೊಡನೆ(ಸ) ತನ್ನನ್ನು ರಕ್ಷಿಸುವಂತೆ ಗೋಳಿಟ್ಟರು. ಆದರೆ ಪ್ರವಾದಿವರ್ಯರು(ಸ), "ಒಪ್ಪಂದದ ಶರತ್ತುಗಳಿಗೆ ಸಮ್ಮತಿ ಸೂಚಿಸಿಯಾಗಿದೆ. ಆದ್ದರಿಂದ ಈಗ ನಾನೇನೂ ಮಾಡುವಂತಿಲ್ಲ" ಎಂದು ಉತ್ತರಿಸಿದರು. ಪ್ರವಾದಿವರ್ಯರ(ಸ) ಬಳಿ ಸಾವಿರದ ನಾಲ್ನೂರು ಮಂದಿ ಶಸ್ತ್ರಧಾರಿ ಸೈನಿಕರಿದ್ದರು ಮತ್ತು ಅವರ ಒಂದೇ ಒಂದು ಸೂಚನೆಯು ಅಬೂಜಂದಲ್‌ರನ್ನು(ರ) ವಿಮೋಚಿಸಲು ಸಾಕಾಗುತ್ತಿತ್ತು. ಪ್ರವಾದಿ ವರ್ಯರು(ಸ) ಒಪ್ಪಂದದ ಶರತ್ತುಗಳಿಗನುಗುಣವಾಗಿ ಆ ವ್ಯಕ್ತಿಯನ್ನು ಶತ್ರುಗಳಿಗೆ ಒಪ್ಪಿಸಿದರು. ಇದಕ್ಕಿಂತ ಶ್ರೇಷ್ಠ ಕರಾರು ಪಾಲನೆಯ ನಿದರ್ಶನ ಎಲ್ಲಾದರೂ ಇದ್ದೀತೇ?

## ಸಮಗ್ರ ಮಾರ್ಗದರ್ಶಿ

ಪ್ರವಾದಿವರ್ಯರ(ಸ) ಬದುಕಿನ ಯಾವ ರಂಗವನ್ನು ತೆಗೆದು ನೋಡಿದರೂ ಅವರೊಬ್ಬ ಪರಿಪೂರ್ಣ ವ್ಯಕ್ತಿಯಾಗಿ ಗೋಚರಿಸುತ್ತಾರೆ. ಅವರ ಪಾವನ ವ್ಯಕ್ತಿತ್ವವು ಮಾನವೀಯತೆಯ ಅತ್ಯುನ್ನತ ಮಾದರಿಯಾಗಿದೆ. ಜೀವನದ ಯಾವ ಮಗ್ಗುಲನ್ನು ನೋಡಿದರೂ ಅವರೊಬ್ಬ ಕಳಂಕರಹಿತ ಮನುಷ್ಯರಾಗಿ ಕಂಗೊಳಿಸುತ್ತಾರೆ. ಈ ಅನ್ಯಾದೃಶ ವೈಶಿಷ್ಟ್ಯವೇ ಅವರು ದೇವ ಪ್ರವಾದಿಯೆಂಬುದಕ್ಕೆ ಮತ್ತು ವಿಶ್ವಾಸಪಾತ್ರ ಮಾರ್ಗದರ್ಶಿಯೆನ್ನುವುದಕ್ಕೆ ಸ್ಪಷ್ಟ ಪುರಾವೆ. ವಿಶ್ವಾಸಾರ್ಹ ಚಾರಿತ್ರ್ಯ ಹೊಂದಿದ ವ್ಯಕ್ತಿಯನ್ನು ಮಾತ್ರ ಜನರು ಹೃದಯಂಗಮವಾಗಿ ಅನುಸರಿಸಲು ಸಾಧ್ಯ. ಪ್ರವಾದಿ ಮುಹಮ್ಮದ್(ಸ) ರವರನ್ನು ಬಿಟ್ಟು ಇಂತಹ ಸಮಗ್ರ ಮತ್ತು ನಂಬಲರ್ಹ ಚಾರಿತ್ರ್ಯದ ವ್ಯಕ್ತಿ ಯನ್ನು ಮಾನವೇತಿಹಾಸದಲ್ಲಿ ಕಾಣಲು ಸಾಧ್ಯವಿಲ್ಲ. ಮಾನವತೆಯ ಸಮಗ್ರ ಮಾರ್ಗದರ್ಶಿಯೆಂದು ಪರಿಗಣಿಸಬಹುದಾದ ವ್ಯಕ್ತಿತ್ವ ಬೇರೆ ಸಿಗದು.

ಪ್ರವಾದಿ ಮುಹಮ್ಮದ್‌ರವರ(ಸ) ಜೀವನದ ಪ್ರತಿಯೊಂದು ಅಂಗವೂ ಮನುಷ್ಯನಿಗೆ ಮಾರ್ಗದರ್ಶಿ ಮತ್ತು ಅನುಕರಣೀಯ. ಯಾವ ಹಂತದಲ್ಲೂ

ಅದು ಅಪ್ರಾಯೋಗಿಕವೆಂದಾಗಲಿ, ಅಪ್ರಸ್ತುತವೆಂದಾಗಲಿ ಎನಿಸುವುದಿಲ್ಲ. ಅವರ ಬದುಕಿನ ಒಂದೊಂದು ವೃತ್ತಾಂತವೂ ನಂತರದ ಪೀಳಿಗೆಗೆ ಅನುಕರಣೀಯವಾಗುವಂತೆ ದಾಖಲಿಸಲ್ಪಟ್ಟಿರುವುದು ಬಹುದೊಡ್ಡ ವೈಶಿಷ್ಟ್ಯ. ಮಾನವೇತಿಹಾಸದ ಯಾವ ವ್ಯಕ್ತಿಯ ಬಗೆಗೂ ಇಷ್ಟು ಖಚಿತ ಮತ್ತು ನಿಖರವಾದ ದಾಖಲೆಗಳು ಲಭ್ಯವಿಲ್ಲ. ಮಾನವ ಜೀವನದ ಯಾವ ರಂಗವೂ ಪ್ರವಾದಿಯ ಮಾರ್ಗದರ್ಶನದ ವ್ಯಾಪ್ತಿಗೆ ಅತೀತವಲ್ಲ. ವೈಯಕ್ತಿಕ, ಕೌಟುಂಬಿಕ, ಆಡಳಿತಾತ್ಮಕ ಮತ್ತು ರಾಜತಾಂತ್ರಿಕ – ಹೀಗೆ ಎಲ್ಲ ಕ್ಷೇತ್ರಗಳನ್ನೂ ಅದು ಆವರಿಸಿದೆ. ಒಟ್ಟಿನಲ್ಲಿ ಪ್ರವಾದಿವರ್ಯರ(ಸ) ಬದುಕು ಪ್ರತಿಯೊಬ್ಬರಿಗೂ ಆದರ್ಶಪ್ರಾಯವಾದ ಪರಿಪೂರ್ಣ ಮಾರ್ಗದರ್ಶನವನ್ನು ಒಳಗೊಂಡಿದೆ.

ಪ್ರವಾದಿವರ್ಯರ(ಸ) ಚಾರಿತ್ರ್ಯದ ಶ್ರೇಷ್ಠತೆಯನ್ನು ಯಾರಿಂದಲೂ ಅಳೆಯಲು ಸಾಧ್ಯವಿಲ್ಲ. ಆದರೆ ಅವರ ಬಗ್ಗೆ ಕೃತಜ್ಞತಾಭಾವ ಬೆಳೆಸುವುದಷ್ಟೆ ನಮ್ಮ ಕರ್ತವ್ಯವಲ್ಲ, ಖಂಡಿತವಾಗಿಯೂ ಆ ಮಹಾ ಪುರುಷರ ಸ್ಮರಣೆ ಮತ್ತು ಪ್ರಕೀರ್ತನೆಯಿಂದ ಪುಣ್ಯ ದೊರೆಯಬಹುದು. ವಾಸ್ತವದಲ್ಲಿ ನಮ್ಮ ಪರಮ ಗುರಿಯು ಪ್ರವಾದಿವರ್ಯರ(ಸ) ಶಿಕ್ಷಣವನ್ನು ಮೈಗೂಡಿಸಿಕೊಂಡು, ಅವರು ಹಾಕಿಕೊಟ್ಟ ನೈತಿಕ ಸಂಹಿತೆಯನ್ನು ಪಾಲಿಸುವುದಾಗಿರಬೇಕು. ಆ ಮಹಾನ್ ವ್ಯಕ್ತಿಯ ಅನುಸರಣೆಯೇ ನಾವು ಅವರಿಗೆ ಸಲ್ಲಿಸಬಹುದಾದ ಶ್ರೇಷ್ಠ ಶ್ರದ್ಧಾಂಜಲಿಯಾಗಿರುವುದು.

❖ ❖ ❖